ಸಾಕ್ಷಿಯನ್ನು ಪ್ರಮಾಣಿಕರಿಸಿದ ದಿನಾಂಕಃ .21.04.2026

ಮುಖ್ಯವಿಚಾರಣೆ ಶ್ರೀ ಎಂ ಎಲ ಎನ್ ವಕೀಲರಿಂದಃ ಪ್ರತಿವಾದಿಯ ಪರವಾಗಿ

ನಾನು ಪ್ರತಿವಾದಿ ಇದ್ದು ನನ್ನ ಮುಖ್ಯ ಸಾಕ್ಷಿಗೆ ಅನುಗುಣವಾಗಿ ನ್ಯಾಯಾಲಯಕ್ಕೆ ಈಗ ನನ್ನ ಪ್ರಮಾಣ ಪತ್ರ ಸಲ್ಲಿಸುತ್ತಿದ್ದು ಅದರಲ್ಲಿ ಬರೆಸಿರುವ ಎಲ್ಲಾ ವಿಷಯಗಳು ಸತ್ಯವಿರುತ್ತವೆ.

1) ನಮ್ಮ ಕುಟುಂಬದ ವಂಶವೃಕ್ಷದ ದೃಡಿಕೃತ ಪ್ರತಿಯನ್ನು ನಿಡಿ-1 ಎಂದು ,
2) ದಾವಾ ಸ್ವತ್ತಿನ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅವುಗಳನ್ನು ನಿಡಿ-2 ರಿಂದ 4 ಎಂದು ಗುರುತಿಸಲಾಯಿತು.
3) ವಂಶವೃಕ್ಷದ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ನಿಡಿ-5 ಎಂದು ಗುರುತಿಸಲಾಯಿತು.
4) ದಾವಾ ಸ್ವತ್ತಿಗೆ ಸಂಬಂಧಿಸಿದ ಗಟಪ್ಲಾಟ ನಕ್ಷೆಯನ್ನು ನಿಡಿ-6 ಎಂದು ಗುರುತಿಸಲಾಯಿತು.
5) ದಾವಾ ಸ್ವತ್ತಿಗೆ ಸಂಬಂಧಿಸಿದ ಪೋಟಿ ಟಿಪ್ಪಣಿಯ ಪ್ರತಿಯನ್ನು ಹಾಜರುಪಡಿಿಸಿದ್ದು ಅದನ್ನು ನಿಡಿ-7 ಎಂದು ಗುರುತಿಸಲಾಯಿತು.
6) ನಮೂನೆ 10 ರ ದೃಡಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿಡಿ-8 ಎಂದು ಗುರುತಿಸಲಾಯಿತು.
7) ಆಕಾರ ಬಂದನ ದೃಡಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ-9 ಎಂದು ಗುರುತಿಸಲಾಯಿತು.

ಪಾಟೀಸವಾಲುಃ ವಾದಿ ಪರ ಶ್ರೀ ಎಸ ಎಲ ಪಿ ವಕೀಲರಿಂದ

ನನ್ನ ಅತ್ತೆಯ ಹೆಸರು ಹೊಳೆಯವ್ವ ತಾಯಿ ದುರ್ಗವ್ವ ಹರಿಜನ ಎಂದರೆ ಸರಿ. ಅವರಿಗೆ ಪರಮೇಶ್ವರಪ್ಪ ಒಬ್ಬನೆ ಮಗ ಎಂದರೆ ಸರಿ. ಪರಮೇಶ್ವರಪ್ಪ ನನ್ನ ಗಂಡ ಎಂದರೆ ಸರಿ. ನನಗೆ ವಾದಿ ಒಬ್ಬಳೆ ಮಗಳು ಎಂದರೆ ಸರಿ. ದಾವಾ ಸ್ವತ್ತು ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ದಾವಾ ಸ್ವತ್ತು ನನ್ನ ಗಂಡನಿಗೆ ನನ್ನ ಅತ್ತೆಯಿಂದ ಬಂದಿದೆ ಎಂದರೆ

ಸರಿ. ದಾವಾ ಸ್ವತ್ತಿನಲ್ಲಿ ವಾದಿಗೆ ಅರ್ಧ ಭಾಗ ಹಿಸ್ಸೆ ಇದೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಮಾಹಿತಿ ಇರುತ್ತದೆ.

ಮರು ವಿಚಾರಣೆ ಇಲ್ಲ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಕುಷ್ಟಗಿ